**ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ ದಂಡಾಧಿಕಾರಿಗಳ ನ್ಯಾಯಾಲಯ,**

**ಕುಮಟಾ**

**ಸಿ.ಸಿ.ನಂ.** 1401/2021

ಸಿ.ಡಬ್ಲ್ಯು 01

ಪಿ.ಡಬ್ಲ್ಯು 01

| | | |
|---|---|---|
| ಸಾಕ್ಷಿದಾರರ ಹೆಸರು | – | ವಿನಾಯಕ ವಿಘ್ನೇಶ್ವರ ಭಟ್ |
| ತಂದೆಯ ಹೆಸರು | – | ವಿಘ್ನೇಶ್ವರ ಭಟ್ |
| ವಯಸ್ಸು | – | 52 ವರ್ಷ |
| ಉದ್ಯೋಗ | – | ರೈತಾಬಿ |
| ವಾಸ್ತವ್ಯ | – | ಅರವಳ್ಳಿ, ಕುಮಟಾ |

(ಇಂದು ದಿನಾಂಕಃ **06-03-2026** ರಂದು ಸತ್ಯಪ್ರತಿಜ್ಞೆಯ ಮೇರೆಗೆ ಪ್ರಮಾಣವಚನ ಬೋಧಿಸಲಾಯಿತು.)

**ಮುಖ್ಯ ವಿಚಾರಣೆ – ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ಚಾಸಾ-2 ರಿಂದ 7 ರವರ ಪರಿಚಯವಿದೆ. ಆರೋಪಿತನ ಪರಿಚಯವಿದೆ. ದಿಃ29-01-2021 ರಂದು ಮಧ್ಯಾಹ್ನ 1-45 ಗಂಟೆಗೆ ನಾನು ನನ್ನ ಕಾರನ್ನು ತೆಗೆದುಕೊಂಡು ಮನೆಗೆ ಊಟಕ್ಕೆ ಹೋಗುತ್ತಿರುವಾಗ ಸಂತೆಗುಳ್ಳಿ ಸೇತುವೆ ಹತ್ತಿರ ಆರೋಪಿತನು ಆತನ ಬೈಕನಲ್ಲಿ ಇಬ್ಬರು ವ್ಯಕ್ತಿಗಳು ಬಂದು ಆತನ ಹಿಂದೆ ಚಾಸಾ-6 ರವರು ಕುಳಿತಿರುತ್ತಾರೆ. ಅವರು ಏಕಾಏಕಿಯಾಗಿ ನನ್ನ ಮೇಲೆ ಆರೋಪಿತನು ನನ್ನನ್ನು ಉದ್ದೇಶಿಸಿ ಏ ಬೋಳಿಮಗನೇ ನಿನ್ನನ್ನು ಮುಗಿಸದೇ ಬಿಡುವುದಿಲ್ಲ ನಾನು ಜೈಲಿಗೆ ಹೋಗಲು ಕಾರಣ ನೀನೆ ಮಹೇಶ ಗೌಡನನ್ನು ಕೋಲೆ ಮಾಡಿರುವ ಹಾಗೂ ನಿನ್ನನ್ನು ಕೋಲೆ ಮಾಡುವುದಾಗಿ ಜೀವ ಬೆದರಿಕೆ ಹಾಕಿರುತ್ತಾರೆ. ಅದೇ ದಿನ ನಾನು ಪೊಲೀಸ ಠಾಣೆಯಲ್ಲಿ

ದೂರನ್ನು ನೀಡಿರುತ್ತೇನೆ. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು, ನಿಪಿ-1 ಎಂದು ಸಾಕ್ಷಿಯ ಸಹಿಯನ್ನು ನಿಪಿ.1ಎ ಎಂದು ಗುರುತಿಸಿಲಾಯಿತು. ನಂತರ ಮರುದಿನ ಪೊಲೀಸರು ಸ್ಥಳ ಪಂಚನಾವೆಯನ್ನು ಮಾಡಿ ಭಾವಚಿತ್ರವನ್ನು ತೆಗೆದಿರುತಾ್ತೆರ. ಸಾಕ್ಷಿಯು ಸ್ಥಳ ಪಂಚಾಮೆಯನ್ನು ನೋಡಿ ಗುರುತಿಸಿದ್ದು, ನಿಪಿ-2 ಎಂದು ಸಾಕ್ಷಿಯ ಸಹಿಯನ್ನು ನಿಪಿ.2ಎ ಎಂದು ಗುರುತಿಸಿಲಾಯಿತು. ಸಾಕ್ಷಿಯು ಭಾವ ಚಿತ್ರವನ್ನು ನಿಪಿ-3 ಎಂದು ಗುರುತಿಸಲಾಯಿತು. ನಂತರ ಆರೋಪಿತನು ಕೃತ್ಯಕ್ಕೆ ಉಪಯೋಗಿಸಿ ಮೋಟಾರ ಬೈಕನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಅದನ್ನು ಬೈಕನ ಭಾವಚಿತ್ರವನ್ನು ನಿಪಿ-4 ಎಂದು ಗುರುತಿಸಲಾಯಿತು. ಆರೋೀತನನ್ನು ನೋಡಿ ಗುರುತಿಸುತ್ತೇನೆ. ಆರೋಪಿಯು ಗೈರು ಹಾಜರಿದ್ದು, ಗುರುತಿಸುವಿಕೆಯಲ್ಲಿ ತಕರಾರು ಇದೆ ಎಂದು ತಿಳಿಸಿರುತ್ತಾರೆ.

(ಈ ಹಂತದಲ್ಲಿ ಆರೋಪಿತರು ಗುರುತಿಸುವಿಕೆಯಲ್ಲಿ ತಕರಾರು ಇದೆ ತಿಳಿದ ಮೇರೆಗೆ ಮುಂದುವರೆದು ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ.

ಪ್ರಭಾರ ಪ್ರಧಾನ ಪ್ರ.ದ.ನ್ಯಾ.ದಂ. ಕುಮಟಾ